ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ|| 22, ಸ್ಟ 1887.

☞ ಈ ಭಾಗವನ್ನು ಪ್ರತ್ಯೇಕ ಶೀರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಜೀಫ್ ಜಡ್ಜ್‌ರು, ವಗ್ಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖಾ.

ತಾರೀಖು 11ನೇ ಅಕ್ಟೋಬರ್ 1887.

ಇದರಿಂದ ತಿಳಿಯಪಡಿಸುವದೇನಂದರೆ, ಮೈಸೂರಿಂದ 43ನೇ ಮೈಲಿಯಲ್ಲಿರುವ ಹೆಗ್ಗಡದೇವನಕೋಟೆ ತಾಲ್ಲೂಕು ನಿಸನ ಸ್ಥಳದಲ್ಲಿ ಹೊಸದಾಗಿ ಹಿಡಿಯಲ್ಪಟ್ಟ ಈ ಕೆಳಗೆ ನಮೂದು ಮಾಡಲ್ಪಡುವ ಆನೆಗಳು ಮತ್ತು ಈ ಮಧ್ಯ ಲಾಲದಲ್ಲಿ ಹಿಡಿಯಲ್ಪಡುವ ಆನೆಗಳು ಸಹ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಸೂಪರ್‌ಟೆಂಡೆಂಟರವರಿಂದ ಸ್ಟ 1887ನೇ ಇಸವಿ ನವಂಬರ್ 14ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು.

ನಂಬರು.	ಹೆಸರುಗಳು.	ಜಾತಿ.	ಎತ್ತರ.		ಹಿಡಿಯಲ್ಪಟ್ಟ ತಿಂಗಳು.	ಷರಾ.
			ಅಡಿ.	ಅಂಗುಲ.		
1	ಗಜಲಕ್ಷ್ಮಿ ..	ಹೆಣ್ಣು.	4	10	1887ನೇ ಏಪ್ರಿಲ್	
2	ಸದಾಶಿವ ..	ಗಂಡು	4	5	ಡಿಟೋ ಜೂನ್	
3	ಶುಕಾರಿ ..	ಹೆಣ್ಣು.	4	0	ಡಿಟೋ ಆಗಸ್ಟ್	

ಷರತ್ತುಗಳು:—ಶೇಕಡಾ 25 ರೂಪಾಯಿ ಪ್ರಕಾರ ತೇವಣಿ ಮೊಬಲಗನ್ನು ಕೂಡ್ಲಿ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿ ಪಾವತೀ ಮಾಡತಕ್ಕದ್ದು. ಬಾಕಿ ಮೊಬಲಗನ್ನು ಹರಾಜ್ ತಾರೀಖು ಲಾಗಾಯತು 15 ದಿನಗಳೊಳಗಾಗಿ ಮತ್ತು ಆನೆಗಳನ್ನು ಸಾಗಿಸಿಕೊಳ್ಳುವದಕ್ಕೆ ಮುಂಚಿತವಾಗಿ ಪಾವತೀ ಮಾಡಬೇಕು, ಇದಕ್ಕೆ ತಪ್ಪಿದರೆ ತೇವಣಿ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದಲ್ಲದೆ ಆನೆಗಳು ಪುನರ್ಜ್ಜ ಹರಾಜ್ ಮಾಡಲ್ಪಡುವವು ನಷ್ಟಕ್ಕೆ ಅವಲ್ ಖರೀದೀದಾರನು ಗುರಿಯಾಗತಕ್ಕದ್ದು. ಹರಾಜಿನಲ್ಲಿ ಜಾಸ್ತಿ ಹುಟ್ಟಿದರೆ ಆದರಲ್ಲಿ ಆತನಿಗೆ ಯೇನೂ ಸಲ್ಲಲಾರದು.

ಖರೀದಿ ತಾರೀಖು ಲಾಗಾಯಿತು ಖರೀದಿದಾರನೇ ಆನೆಗಳ ರಾತೀಪು ವಗ್ಗೈರೆ ಖರ್ಚುಗಳನ್ನು ವಹಿಸತಕ್ಕದ್ದು.

ತಾರೀಖು 3ನೇ ಅಕ್ಟೋಬರ್ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ದೇಶದಲ್ಲಿ ಪ್ರತ್ಪತ್ತಿಯಾದ ಗಂಧದ ಸಾಲೀಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಜಾಗಾಗಳಲ್ಲಿ ಅವುಗಳ ಬಾಜೂಫಲ್ಲಿ ನಮೊದಿಸಿರುವ ತಾರೀಖುಗಳಲ್ಲಿ ಆಯಾಯ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರು ವ ಫಾರೆಸ್ಟ್ ಆಫೀಸರರುಗಳಿಂದ ನಡಿಸಲ್ಪಡುವವು.

ಶಿವಮೊಗ್ಗಾ ಡಿಸ್ಟ್ರಿಕ್ಟು—ತೀರ್ಥಹಳ್ಳಿ ಕೋರಿ	10ನೇ ನವಂಬರ್ 1887.	ಹೆಚ್ಚ್ಯಕಡಮೆ	250 ಟ್ಯಗಳು.
ಅನಂತಪುರದ ಕೋರಿ ..	14ನೇ ಡಿಟೋ ..		50 ಡಿಟೋ
ಶಿವಮೊಗ್ಗಾ ಡಿಟೋ ..	19ನೇ ಡಿಟೋ ..		500 ಡಿಟೋ
ತೀರ್ಥಹಳ್ಳಿ ಡಿಟೋ ..	25ನೇ ಡಿಟೋ ..		200 ಡಿಟೋ
ಕಡೂರು ಡಿಸ್ಟ್ರಿಕ್ಟು—ಚಿಕ್ಕಮಗಳೂರು ಕೋರಿ	1ನೇ ಡಿಸಂಬರ್ 1887 ..		200 ಡಿಟೋ
ಹಾಸನ ಡಿಸ್ಟ್ರಿಕ್ಟು—ಹಾಸನ ಕೋರಿ	7ನೇ ಡಿಟೋ ..		300 ಡಿಟೋ
ಮೈಸೂರು ಡಿಸ್ಟ್ರಿಕ್ಟು—ಶ್ರೀರಂಗಪಟ್ಟಣ ಕೋರಿ	12ನೇ ಡಿಟೋ ..		800 ಡಿಟೋ
ಹುಣಸೂರು ಡಿಟೋ ..	16ನೇ ಡಿಟೋ ..		
ಬೆಂಗಳೂರು ಡಿಸ್ಟ್ರಿಕ್ಟು—ಬೆಂಗಳೂರು ಕೋರಿ	20ನೇ ಡಿಟೋ ..		150 ಡಿಟೋ

ಪರಾಜಿನ ಪರತ್ತುಗಳು—1887ನೇ ಇಸವಿ ಆಗಸ್ಟ್ 27 ಮತ್ತು ಸೆಪ್ಟಂಬರ್ 3ನೇ ಮಸ್ತ್ರಂಗಳ 34, 35ನೇ ನಂಬರು ಗೆಜೆಟ್ ಗಳಲ್ಲಿ ಫಾಯಿಷ್ ಮಾಡಲ್ಪಟ್ಟ ಇಸ್ತಿಹಾರ್‌ಗಳನ್ನ ನೋಡಿಕೊಳ್ಳತಕ್ಕದ್ದು. ಮತ್ತು ಸದರೀ ಇಸ್ತಿಹಾರ್‌ಗಳು ಹರಾಜ್ ಕಾಲದಲ್ಲಿ ಓದಲ್ಪಡುವವು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜ್‌ರ್ಯವರ ಕೋರ್ಟ್‌ನಲ್ಲಿ.

1887ನೇ ಇಸವಿ ಮಿ|| ಅರ್ಜೀ ನಂಬರ್ 764.

ಮೃತಪಟ್ಟ ಬೆಂಗಳೂರು ಗುಡಮಯ್ಯನಪೇಟೇಲಿದ್ದ ಜೋಡ್ಡು ಫಲಾಯತ ಮುನಿದಾಸಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಡಿಟೋ ಗುಡಮಯ್ಯನ ಪೇಟೇಲಿರುವ ಮುನಿದಾಸಪ್ಪನ ಹೆಂಡತಿ ಚನ್ನಮ್ಮ ಮೃತಪಟ್ಟ ಸದರೀ ಮುನಿದಾಸಪ್ಪನಿಗೆ ಹೆಂಡತಿಯಾಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ಸ್ಥಳದ ಚನ್ನಮ್ಮನು ಗುಡಮಯ್ಯನಪೇಟೇ ವಾಸಸ್ಥನಾಗಿ ಮೃತಪಟ್ಟ ಮುನಿದಾಸಪ್ಪನ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಚನ್ನಮ್ಮನ ಅರ್ಜೀಯನ್ನು 1887ನೇ ಇಸವಿ ನವಂಬರ್ ತಿಂಗಳು ತಾರೀಖು 4ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುನಿದಾಸಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟ್ಯರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

ಸ|| 1887ನೇ ಇಸವಿ ಅಕ್ಟೋಬರ್ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೇ ಕೊಡೋಣಾಗಿದೆ.

ದಿವಾಳೀಯಾದ ಡಿಕ್ರೀ ದೇಣೇದಾರ ಬೆಂಗಳೂರು ತರಗಿನಪೇಟೇಲಿರುವ ವೀರಸಂಗಂಣನವರ ರುದ್ರಪ್ಪನ ವಿಷಯದಲ್ಲಿ—

ಸ|| 1887ನೇ ಇಸವಿ ದಿವಾಳೀ ಮಿ|| ಕೇಸ್ ನಂಬರ್ 263.

ಪುಕ್ಕುಂ.

ಮೇಲ್ಕಂಡ ರುದ್ರಪ್ಪನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜ್‌ಯವರಾದ ಮೆ|| ಸಿ. ಕ್ರೆಸ್ ಸಾಹೇಬರವರ ರೂಬರೂ ಅರ್ಜೀದಾರನಾದ ರುದ್ರಪ್ಪನ ಪರವಾಗಿ ಮೆ|| ಅಡ್ವೊಕೇಟ್ ನಾರಾಯಣರಾವ್ ರವರನ್ನ ಮತ್ತು ಸದರೀ ಯವನ ಲೇಣೇದಾರ್‌ರಾದ 3ನೇ ಮುನಿಯಪ್ಪನವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.